## ಕರ್ನಾಟಕ ಸರ್ಕಾರ

ಸಂಖ್ಯೆ: ಹೆಚ್‌ಡಿ 212 ಸಿಎಸ್‌ಎ 92

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ: 5-1-1993.

## ಸುತ್ತೋಲೆ

ವಿಷಯ: ಟಿ.ವಿ. ಪರದೆಯ ಮೇಲೆ ವಿಡಿಯೋ ಕ್ಯಾಸೆಟ್ ರೆಕಾರ್ಡರ್ ಮುಖಾಂತರ ಚಲನಚಿತ್ರ ಪ್ರದರ್ಶಿಸುವ ಬಗ್ಗೆ.

---

ಕೆಲವು ವಿಡಿಯೋ ಪಾರ್ಲರ್‌ಗಳಲ್ಲಿ ಪ್ರೊಜೆಕ್ಟರನ್ನು ಉಪಯೋಗಿಸಿ ದೊಡ್ಡ ಪರದೆಯ ಮೇಲೆ ಚಲನಚಿತ್ರ ಪ್ರದರ್ಶಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ, ಹಾಗೂ ಈ ಬಗ್ಗೆ ವಿಡಿಯೋ ಪಾರ್ಲರ್ ಅವರು ಸಾರ್ವಜನಿಕ ಜಾಹಿರಾತನ್ನು ನೀಡಿರುವುದು ಸಹ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಕರ್ನಾಟಕ ವಿಡಿಯೋ ಕ್ಯಾಸೆಟ್ ಮುಖಾಂತರ ದೂರದರ್ಶನ ಪರದೆಯ ಮೇಲೆ ಚಲನಚಿತ್ರ ಪ್ರದರ್ಶನ (ನಿಯಂತ್ರಣ) ನಿಯಮಗಳು 1984ರ ಪ್ರಕಾರ ದೂರದರ್ಶನ ಪರದೆಯ ವಿನಃ ಹಾಗೂ ವಿಡಿಯೋ ಕ್ಯಾಸೆಟ್ ರೆಕಾರ್ಡರನ್ನು ಹೊರತುಪಡಿಸಿ ಬೇರಾವುದೇ ರೀತಿಯಲ್ಲಿ ಚಿತ್ರ ಪ್ರದರ್ಶಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಆದ್ದರಿಂದ ದೊಡ್ಡ ಪರದೆಯ ಮೇಲೆ ಚಲನಚಿತ್ರ ಪ್ರದರ್ಶಿಸುವುದು ಕರ್ನಾಟಕ ವಿಡಿಯೋ ಕ್ಯಾಸೆಟ್ ಮುಖಾಂತರ ದೂರದರ್ಶನ ಪರದೆಯ ಮೇಲೆ ಚಲನಚಿತ್ರ ಪ್ರದರ್ಶನ (ನಿಯಂತ್ರಣ) ನಿಯಮಗಳು 1984ರ ನಿಯಮಾವಳಿಗಳ ಉಲ್ಲಂಘನೆಯಾಗಿರುತ್ತದೆ.

ಆದುದರಿಂದ ಎಲ್ಲಾ ಜಿಲ್ಲಾ ದಂಡಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರುಗಳು ಮೇಲೆ ತಿಳಿಸಿರುವ ನಿಯಮಗಳನ್ನು ಉಲ್ಲಂಘಿಸಿ ದೊಡ್ಡ ಪರದೆಯ ಮೇಲೆ ಚಲನಚಿತ್ರ ಪ್ರದರ್ಶಿಸುವ ವಿಡಿಯೋ ಪಾರ್ಲರ್‌ಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಸೂಚಿಸಲಾಗಿದೆ.

ಸಹಿ,
(ಆರ್.ವಿ.ಗೋವಿಂದರಾವ್)
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ

ಗೆ:

1) ಎಲ್ಲಾ ಜಿಲ್ಲಾ ದಂಡಾಧಿಕಾರಿಗಳಿಗೆ
2) ಎಲ್ಲಾ ಪೊಲೀಸ್ ಅಧೀಕ್ಷಕರುಗಳಿಗೆ
3) ಶಾಖಾ ರಕ್ಷಾ ಕಡತ
4) ಹೆಚ್ಚುವರಿ ಪ್ರತಿಗಳು

ನಕಲು: ಅಧ್ಯಕ್ಷರು, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ, ನಂ.28, 1ನೇ ಮುಖ್ಯರಸ್ತೆ, ಕ್ರೆಸೆಂಟ್ ರಸ್ತೆ, ಹೈಗ್ರೌಂಡ್ಸ್, ಬೆಂಗಳೂರು - 1.

// ಪ್ರತಿ //